10. ದಿಃ 31-08-2020 ರಂದು ನಾನು ಪೊಲಿಸರಿಗೆ ನನ್ನ ಕುಪ್ಪಸ ಮು ಮಾ 2 ನ್ನು ಹಾಜರು ಪಡಿಸಿದ್ದು ಅದನ್ನು ಪೊಲಿಸರು ತೆಗೆದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಸಮಯ ಬೆಃ 1-30 ರಿಂದ 11-30 ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

| Form No.4 (Civil) Deposition Sheets (R.P.No.57) |
|---|

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 92/2020

ಪ್ರಾ.ಸಾ. 3 ಚಾ.ಸಾ. 2

| | | |
|---|---|---|
| ಹೆಸರು | : | ಮಲ್ಲಪ್ಪ |
| ತಂದೆಯ ಹೆಸರು | : | ಸಿದ್ದಪ್ಪ ಪೂಜಾರಿ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಮೈಲಾಪೂರ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 15-12-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-1 ಮತ್ತು 3 ಇವರ ಪರಿಚಯ ಇದೆ. ಈ ಗ್ಗೆ ಸುಮಾರು 2-3 ವರ್ಷಗಳ ಹಿಂದೆ ಪೊಲಿಸರು 1 ನೇ ಆರೋಪಿತನ ಮನೆಯ ಬಳಿ ಕರೆಯಿಸಿದ್ದು ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದ್ದು ಪೊಲೀಸರ ಕೋರಿಕೆ ಮೇರೆಗೆ ಸದರಿ ಸಹಿ ಮಾಡಿರುತ್ತೇನೆ. ಆ ಪಂಚನಾಮೆಯನ್ನು ಈಗಾಗಲೆ ನಿ.ಪಿ.2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ನಕ್ಷೆಯನ್ನು ಈಗಾಗಲೆ ನಿ.ಪಿ.4 ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ 3 ಭಾವಚಿತ್ರವನ್ನು ತೋರಿಸುತ್ತಿದ್ದು ಅದರಲ್ಲಿ ನಾನು ಕಾಣುತ್ತಿದ್ದು ಸದರಿ ಭಾವಚಿತ್ರವನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ.

2. ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದ್ದು ಪೊಲೀಸರ ಕೋರಿಕೆ ಮೇರೆಗೆ ಸದರಿ ಸಹಿ ಮಾಡಿರುತ್ತೇನೆ. ಆ ಪಂಚನಾಮೆಯನ್ನು ಈಗಾಗಲೆ ನಿ.ಪಿ.5 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.5(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ನಿಪಿ 6 ಭಾವಚಿತ್ರವನ್ನು ತೋರಿಸುತ್ತಿದ್ದು ಅದರಲ್ಲಿ ನಾನು ಕಾಣುತ್ತಿದ್ದು ಸದರಿ ಭಾವಚಿತ್ರವನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ನಿ.ಪಿ.2 ಮತ್ತು 4, 5 ರಲ್ಲಿ ಬರೆದ ವಿಷಯ ಗೊತ್ತಿರುವುದಿಲ್ಲ.